

# ‘ಮಾಸ್ತಿಗುಡಿ’ಯ ಗುಂಗು

ದುನಿಯಾ ವಿಜಯ್ ಪಾಲಿಗೆ 2017 ಸ್ಮರಣೀಯ ವರ್ಷವಾಗುವ ಲಕ್ಷಣಗಳು ಕಾಣಿಸುತ್ತಿವೆ. ಅವರ ಅಭಿನಯದ ‘ಮಾಸ್ತಿಗುಡಿ’ ಚಿತ್ರವನ್ನು ತೆರೆ ಕಾಣಿಸುವ ಸಿದ್ಧತೆಗಳು ತೀವ್ರತೆ ಪಡೆಯುತ್ತಿರುವಂತೆಯೇ, ಚಿತ್ರದ ಕುರಿತ ನಿರೀಕ್ಷೆಗಳೂ ಹೆಚ್ಚುತ್ತಿವೆ. ಈ ಸಿನಿಮಾ ವಿಜಯ್ ವೃತ್ತಿ ಬದುಕಿನ ವಿಶೇಷ ಸಿನಿಮಾ ಎಂದು ಚಿತ್ರತಂಡ ಹೇಳುತ್ತಿದೆ.

‘ಮಾಸ್ತಿಗುಡಿ’ಯಲ್ಲಿ ವಿಜಯ್ ಮೂರು ವಿಭಿನ್ನ ಆಯಾಮಗಳ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರಂತೆ. ನಾಗಶೇಖರ್ ನಿರ್ದೇಶನದ ಈ ಚಿತ್ರವನ್ನು ವಿತರಕ ಜಾಕ್ ಮಂಜು ದೊಡ್ಡ ಮೊತ್ತಕ್ಕೆ ಕೊಂಡುಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ.

ನಿರ್ದೇಶಕ ನಾಗಶೇಖರ್ ಪ್ರಚಲಿತ ವಿದ್ಯಮಾನಗಳನ್ನು ದೃಶ್ಯರೂಪಕ್ಕೆ ತರುವಲ್ಲಿ ಸಿದ್ಧಹಸ್ತರು. ‘ಮಾಸ್ತಿಗುಡಿ’ ಚಿತ್ರದಲ್ಲೂ ಅವರು ಪರಿಸರಕ್ಕೆ ಸಂಬಂಧಿಸಿದ ಸಂಗತಿಗಳನ್ನು ಪ್ರಸ್ತಾಪಿಸಿದ್ದಾರಂತೆ. ಹುಲಿಗಳ ಸಂರಕ್ಷಣೆಯ ಕುರಿತು ಮಾತನಾಡುವ ಸಿನಿಮಾ, ಮನುಷ್ಯ ಹಾಗೂ ಪ್ರಕೃತಿಯ ಸಂಬಂಧದ ಕಥೆ ಒಳಗೊಂಡಿದೆ.

‘ಮಾಸ್ತಿಗುಡಿ’ ಬಗ್ಗೆ ಮಾತನಾಡುವಾಗ, ಚಿತ್ರೀಕರಣದ ಸಮಯದಲ್ಲಿ ಉದಯ್ ಹಾಗೂ ಅನಿಲ್ ಎನ್ನುವ ಕಲಾವಿದರು ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಮುಳುಗಿ ದುರ್ಮರಣ ಹೊಂದಿದ ಕಹಿ ಸಹಜವಾಗಿಯೇ ನೆನಪಾಗುತ್ತದೆ. ಆ ಆಘಾತದಿಂದ ಚಿತ್ರತಂಡ ಇನ್ನು ಹೊರಬಂದಿಲ್ಲ. ಅಗಲಿದ ಗೆಳೆಯರಿಗೆ ಶ್ರದ್ಧಾಂಜಲಿಯ ರೂಪದಲ್ಲಿ ‘ಮಾಸ್ತಿಗುಡಿ’ ತೆರೆಕಾಣಲಿದೆ. ಅಮೂಲ್ಯ ಹಾಗೂ ಕೃತಿ ಕರಬಂಧ ಚಿತ್ರದ ನಾಯಕಿಯರು. ಸುಹಾಸಿನಿ, ದೇವರಾಜ್, ಶೋಭರಾಜ್, ರವಿಶಂಕರ್ ಗೌಡ ಹಾಗೂ ರಂಗಾಯಣ ರಘು ತಾರಾಗಣದಲ್ಲಿರುವ ಪ್ರಮುಖರು.

ಸಾಧು ಕೋಕಿಲ ಸಂಗೀತ ಸಂಯೋಜನೆಯ ಗೀತೆಗಳು ಈಗಾಗಲೇ ಅನಾವರಣಗೊಂಡಿದ್ದು, ಚಿತ್ರರಸಿಕರ ಗಮನಸೆಳೆದಿವೆ. ಏ. 28ರಂದು ‘ಬಾಹುಬಲಿ’ ಚಿತ್ರ ತೆರೆಕಾಣಲಿದ್ದು – ಅದರ ಅಬ್ಬರ ಕೊಂಚ ತಗ್ಗಿದ ನಂತರ, ಮೇ ತಿಂಗಳಲ್ಲಿ ‘ಮಾಸ್ತಿಗುಡಿ’ ತೆರೆ ಕಾಣಲಿದೆ.

ನಾಗಶೇಖರ್ ಹಾಗೂ ವಿಜಯ್ ‘ಮಾಸ್ತಿಗುಡಿ’ಯ ಗುಂಗಿನಿಂದ ಬಿಡಿಸಿಕೊಳ್ಳಲು ಹೆಚ್ಚು ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಚಂದ್ರು ನಿರ್ದೇಶನದ ‘ಕನಕ’ ಚಿತ್ರದಲ್ಲಿ ವಿಜಯ್ ನಟಿಸುತ್ತಿದ್ದಾರೆ. ವರನಟ ರಾಜಕುಮಾರ್ ಅಭಿಮಾನಿಯಾದ ಕನಕ ಎನ್ನುವ ತರುಣನ ಪಾತ್ರ ವಿಜಯ್ ಅವರಿಗೆ ಖುಷಿ ಕೊಟ್ಟಿದೆ. ‘ಕನಕ’ ಚಿತ್ರ ಪೂರ್ಣಗೊಳ್ಳುವ ಮುನ್ನವೇ ವಿಜಯ್ ‘ಜೈ ಲವಕುಶ’ ಎನ್ನುವ ತೆಲುಗು ಚಿತ್ರವೊಂದರಲ್ಲಿ ನಟಿಸುತ್ತಿದ್ದಾರೆ.

‘ಜೈ ಲವಕುಶ’ ಜೂನಿಯರ್ ಎನ್‌ಟಿಆರ್ ನಟಿಸುತ್ತಿರುವ ಚಿತ್ರ. ಈ ಚಿತ್ರದ ಖಳನ ಪಾತ್ರದಲ್ಲಿ ವಿಜಯ್ ನಟಿಸುತ್ತಿದ್ದಾರೆ. ಸಾಹಸ ದೃಶ್ಯಗಳಲ್ಲಿನ ವಿಜಯ್‌ರ ತಲ್ಲೀನತೆಯನ್ನು ಗಮನಿಸಿರುವ ಜೂನಿಯರ್ ಎನ್‌ಟಿಆರ್, ಸ್ವತಃ ವಿಜಯ್ ಅವರೊಂದಿಗೆ ಮಾತನಾಡಿ ತಮ್ಮ ಚಿತ್ರದಲ್ಲಿ ನಟಿಸುವಂತೆ ಕೇಳಿದರಂತೆ. ಈ ಆಹ್ವಾನವನ್ನು ವಿಜಯ್ ಖುಷಿಯಿಂದಲೇ ಒಪ್ಪಿಕೊಂಡಿದ್ದಾರೆ.

ನಿರ್ದೇಶಕ ನಾಗಶೇಖರ್ ‘ಮಾಸ್ತಿಗುಡಿ’ ಬೆನ್ನಲ್ಲೇ ಮತ್ತೊಂದು ಮೋಹಕ ಕನಸಿನ ಬೆನ್ನುಬಿದ್ದಿದ್ದಾರೆ. ಅವರ ಕನಸಿನಲ್ಲೀಗ ಹೊಯ್ಸಳ ದೊರೆ ವಿಷ್ಣುವರ್ಧನ ಹಾಗೂ ಆತನ ಪಟ್ಟಮಹಿಷಿ ಶಾಂತಲಾ ಸುಳಿಯುತ್ತಿದ್ದಾರೆ. ‘ಶಾಂತಲಾ ವಿಷ್ಣುವರ್ಧನ’ ತಮ್ಮ ವೃತ್ತಿಜೀವನದ ಮಹತ್ವಾಕಾಂಕ್ಷೆಯ ಚಿತ್ರವಾಗಲಿದೆ ಎನ್ನುವುದು ಅವರ ನಂಬಿಕೆ. ದುಬಾರಿ ಬಜೆಟ್‌ನ ಈ ಚಿತ್ರದ ಮುಖ್ಯಪಾತ್ರಗಳಲ್ಲಿ ಸುದೀಪ್ ಹಾಗೂ ದೀಪಿಕಾ ಪಡುಕೋಣೆ ಅವರನ್ನು ನಾಗಶೇಖರ್ ಕಲ್ಪಿಸಿಕೊಂಡಿದ್ದಾರೆ. ಈಗ ಚಿತ್ರಕಥೆ ರಚನೆಯಲ್ಲಿ ಅವರು ತೊಡಗಿಕೊಂಡಿದ್ದು, ‘ಮಾಸ್ತಿಗುಡಿ’ ಬಿಡುಗಡೆ ನಂತರ ಐತಿಹಾಸಿಕ ಚಿತ್ರದ ರೂಪುರೇಷೆಗಳು ಇನ್ನಷ್ಟು ಸ್ಪಷ್ಟಗೊಳ್ಳಬಹುದು.

■ ರಘು